**EXAMINATION CODE : 04**

| ಜಿಲ್ಲಾ ಸಂಕೇತ | | ನೋಂದಣಿ ಸಂಖ್ಯೆ | | | | | | |
|---|---|---|---|---|---|---|---|---|
| 4 | 3 | 2 | 3 | 0 | 3 | 5 | 2 | 6 |

| ಪ್ರಶ್ನೆ ಪತ್ರಿಕೆ ಪುಸ್ತಿಕೆ ಕ್ರಮಸಂಖ್ಯೆ |
|---|
| 3078285 |

# ಪ್ರಶ್ನೆ ಪತ್ರಿಕೆ ಪುಸ್ತಿಕೆ - ಪ್ರಥಮ ಪತ್ರಿಕೆ

**(ಪ್ರಶ್ನೆಗಳನ್ನು ಉತ್ತರಿಸುವ ಮೊದಲು ಪ್ರಶ್ನೆ ಪತ್ರಿಕೆಯಲ್ಲಿನ ಎಲ್ಲಾ ಸೂಚನೆಗಳನ್ನು ದಯವಿಟ್ಟು ಓದಿ)**

**ವಿಷಯಗಳು : ಸಾಮಾನ್ಯ ಜ್ಞಾನ , ಶೈಕ್ಷಣಿಕ ಮನೋವಿಜ್ಞಾನ ಮತ್ತು ಮಾನಸಿಕ ಸಾಮರ್ಥ್ಯ**

**(ಈ ಪತ್ರಿಕೆಯು ಎಲ್ಲಾ ಅಭ್ಯರ್ಥಿಗಳಿಗೆ ಸಾಮಾನ್ಯ ಪತ್ರಿಕೆ)**

**ಗರಿಷ್ಠ ಅಂಕಗಳು : 100** **ಗರಿಷ್ಠ ಅವಧಿ : 2 ಗಂಟೆಗಳು**

**10.00 a.m. to 12.00 noon**

**(ಓ.ಎಂ.ಆರ್. ಉತ್ತರ ಪತ್ರಿಕೆ ಮುಖಪುಟದಲ್ಲಿ ಕೇಳಿರುವ ವಿವರಗಳನ್ನು ಭರ್ತಿಮಾಡಲು ನೀಡುವ ಪ್ರಾರಂಭಿಕ 10 ನಿಮಿಷಗಳೂ ಸೇರಿದಂತೆ)**

## ಅಭ್ಯರ್ಥಿಗಳಿಗೆ ಸೂಚನೆಗಳು

1. 100 ಪ್ರಶ್ನೆಗಳಿರುವ ಮೊಹರಾಗಿರುವ ಪ್ರಶ್ನೆಪತ್ರಿಕೆ ಪುಸ್ತಿಕೆಯಲ್ಲಿ ಬಿಡಿ ಓ.ಎಂ.ಆರ್. ಉತ್ತರ ಪತ್ರಿಕೆಯು ಅಡಕಗೊಂಡಿದೆ. ಇದನ್ನು ನಿಮಗೆ ನೀಡಲಾಗಿದೆ.
2. ಪ್ರಶ್ನೆ ಪತ್ರಿಕೆಯ ಸೀಲನ್ನು ಅತೀ ಜಾಗರೂಕತೆಯಿಂದ ಬಿಡಿಸಿ ಅಡಕವಾಗಿರುವ ಓ.ಎಂ.ಆರ್. ಬಿಡಿ ಉತ್ತರ ಪತ್ರಿಕೆಯನ್ನು ಹೊರತೆಗೆದು, ಓ.ಎಂ.ಆರ್. ಉತ್ತರ ಪತ್ರಿಕೆಯಲ್ಲಿ ಕೇಳಿರುವ ಮಾಹಿತಿಯನ್ನು ಮತ್ತು ಸಂಬಂಧಿಸಿದ ವೃತ್ತಗಳನ್ನು, ಅತೀ ಜಾಗರೂಕತೆಯಿಂದ ಕ್ರಮಸಂಖ್ಯೆ 1 ರಿಂದ 8 ರವರೆಗಿನ ಅಂಕಣಗಳಲ್ಲಿ ಭರ್ತಿ ಮಾಡಿ. ತಪ್ಪಿದಲ್ಲಿ ಮೌಲ್ಯಮಾಪನದಲ್ಲಿ ಉಂಟಾಗುವ ತೊಡಕು ಮತ್ತು ಪರಿಣಾಮಗಳಿಗೆ ನೀವೇ ಜವಾಬ್ದಾರರು.
3. ಪ್ರಶ್ನೆ ಪತ್ರಿಕೆಯ ಪುಸ್ತಿಕೆಯ ಸಂಖ್ಯೆ ಮತ್ತು ಓ.ಎಂ.ಆರ್. ಉತ್ತರ ಪತ್ರಿಕೆಯ ಸಂಖ್ಯೆ ಒಂದೇ ಆಗಿದೆಯೇ ಗಮನಿಸಿ. ವ್ಯತ್ಯಾಸ ವಿದ್ದಲ್ಲಿ ತಕ್ಷಣ ಕೊಠಡಿ ಮೇಲ್ವಿಚಾರಕರಿಗೆ ತಿಳಿಸುವುದು.
4. ನಿಮಗೆ ಕೊಟ್ಟಿರುವ ಪ್ರಶ್ನೆಪತ್ರಿಕೆಯ ಕ್ರಮಸಂಖ್ಯೆಯನ್ನು ನಿಮಗೆ ನೀಡಿರುವ ಓ.ಎಂ.ಆರ್. ಉತ್ತರಪತ್ರಿಕೆಯಲ್ಲಿನ ಕ್ರಮಸಂಖ್ಯೆ 4 ರಲ್ಲಿ ಭರ್ತಿ ಮಾಡಬೇಕು.
5. ಪರೀಕ್ಷಾ ಅವಧಿಯಲ್ಲಿ :-
   (ಅ) ಪ್ರತಿ ಪ್ರಶ್ನೆಯನ್ನು ಜಾಗರೂಕತೆಯಿಂದ ಓದಿರಿ.
   (ಆ) ಪ್ರತಿ ಪ್ರಶ್ನೆಗೆ ನೀಡಲಾಗಿರುವ ನಾಲ್ಕು ಉತ್ತರಗಳ ಪೈಕಿ ಸರಿಯಾದ ಉತ್ತರವನ್ನು ಕಂಡುಹಿಡಿಯಿರಿ.
   (ಇ) ಓ.ಎಂ.ಆರ್. ಉತ್ತರಪತ್ರಿಕೆಯಲ್ಲಿ ಪ್ರತಿ ಪ್ರಶ್ನೆಗೆ ಸರಿ ಹೊಂದುವ ಉತ್ತರವನ್ನು ಗುರುತಿಸಲು ನೀಡಲಾಗಿರುವ ನಾಲ್ಕು ವೃತ್ತಗಳ ಪೈಕಿ ಸರಿಯಾದ ವೃತ್ತವನ್ನು ನೀಲಿ/ಕಪ್ಪು ಶಾಯಿಯ ಬಾಲ್ ಪಾಯಿಂಟ್ ಪೆನ್ ಮಾತ್ರ ಉಪಯೋಗಿಸಿ ಗುರುತು ಮಾಡಿ. ಉದಾಹರಣೆಗೆ, ಒಂದು ಪ್ರಶ್ನೆ ಪತ್ರಿಕೆಯಲ್ಲಿನ 20ನೇ ಪ್ರಶ್ನೆಯ ಸರಿ ಉತ್ತರವು ಕ್ರಮಸಂಖ್ಯೆ (3) ಆಗಿದ್ದಲ್ಲಿ ಓ.ಎಂ.ಆರ್. ಉತ್ತರಪತ್ರಿಕೆಯಲ್ಲಿ ಕ್ರಮಸಂಖ್ಯೆ 20 ರ ಮುಂದೆ ಈ ಕೆಳಗೆ ತಿಳಿಸಿರುವ ರೀತಿಯಲ್ಲಿ ನೀಲಿ/ಕಪ್ಪು ಬಾಲ್ ಪಾಯಿಂಟ್ ಪೆನ್ ಉಪಯೋಗಿಸಿ ವೃತ್ತವನ್ನು ಗುರುತು ಮಾಡುವುದು.

   **20.** ① ② ● ④ (ಇದು ಉದಾಹರಣೆ ಮಾತ್ರ)
6. ಪ್ರಶ್ನೆ ಪತ್ರಿಕೆ ಪುಸ್ತಿಕೆಯ ಪುಟಗಳಲ್ಲಿ ಖಾಲಿ ಜಾಗ ಬಿಟ್ಟಿರುವಲ್ಲಿ ಮಾತ್ರ ಉತ್ತರವನ್ನು ಕಂಡು ಹಿಡಿಯುವ ಕಚ್ಚಾ ಕಾರ್ಯವನ್ನು (ರಫ್ ವರ್ಕ್) ಮಾಡತಕ್ಕದ್ದು. ಕಚ್ಚಾ ಕಾರ್ಯವನ್ನು ಓ.ಎಂ.ಆರ್. ಉತ್ತರ ಪತ್ರಿಕೆಯಲ್ಲಿ ಮಾಡತಕ್ಕದ್ದಲ್ಲ.
7. ಒಂದು ಪ್ರಶ್ನೆಗೆ ಉತ್ತರವಾಗಿ ಒಂದಕ್ಕಿಂತ ಹೆಚ್ಚು ವೃತ್ತಗಳನ್ನು ಗುರುತು ಮಾಡಿದಲ್ಲಿ ಅಂತಹ ಉತ್ತರಗಳಿಗೆ ಅಂಕಗಳನ್ನು ನೀಡಲು ಬರುವುದಿಲ್ಲ. ಇದರ ಉದಾಹರಣೆಯನ್ನು ಓ.ಎಂ.ಆರ್. ಉತ್ತರಪತ್ರಿಕೆಯಲ್ಲಿ ನೋಡಿ.
8. ಓ.ಎಂ.ಆರ್. ಉತ್ತರಪತ್ರಿಕೆಯ ನಿಗದಿತ ಸ್ಥಳದಲ್ಲಿ ಅಭ್ಯರ್ಥಿ ಹಾಗೂ ಕೊಠಡಿ ಮೇಲ್ವಿಚಾರಕರು ತಪ್ಪದೇ ಸಹಿ ಮಾಡಬೇಕು. ನಿಗದಿತ ಸ್ಥಳದಲ್ಲಿ ಕಡ್ಡಾಯವಾಗಿ ಅಭ್ಯರ್ಥಿ ಎಡಗೈ ಹೆಬ್ಬೆರಳಿನ ಗುರುತನ್ನು ಹಾಕುವುದು.
9. ಅಭ್ಯರ್ಥಿಗೆ ಉತ್ತರಿಸಲು ನೀಡಿರುವ ಓ.ಎಂ.ಆರ್. ಉತ್ತರಪತ್ರಿಕೆಯು ಕಾರ್ಬನ್ ರಹಿತ ಪ್ರತಿಯೊಂದಿಗೆ ಇದೆ. ಪರೀಕ್ಷಾ ಅವಧಿ ಮುಗಿದ ನಂತರ, ಉತ್ತರಿಸಿದ ಮೂಲ ಓ.ಎಂ.ಆರ್. ಉತ್ತರಪತ್ರಿಕೆಯನ್ನು ಕೊಠಡಿ ಮೇಲ್ವಿಚಾರಕರಿಗೆ ಒಪ್ಪಿಸತಕ್ಕದ್ದು. ಕಾರ್ಬನ್ ಪ್ರತಿಯನ್ನು ಅಭ್ಯರ್ಥಿಯು ಇಟ್ಟುಕೊಳ್ಳಬೇಕು.
10. ಪರೀಕ್ಷಾ ಕೊಠಡಿಯೊಳಗೆ ಲಾಗ್ಟೇಬಲ್ಸ್ ಕ್ಯಾಲ್ಕ್ಯುಲೇಟರ್, ಪೇಜರ್ ಮತ್ತು ಮೊಬೈಲ್ ದೂರವಾಣಿಯನ್ನು ತರುವುದನ್ನು ನಿಷೇಧಿಸಿದೆ.
11. ಪ್ರಶ್ನೆಗಳನ್ನು ಉತ್ತರಿಸಿದ ನಂತರ ಓ.ಎಂ.ಆರ್. ಉತ್ತರ ಪತ್ರಿಕೆಯ ಕ್ರಮಸಂಖ್ಯೆ 8 ರಲ್ಲಿ ಮಾಹಿತಿಯನ್ನು ತುಂಬುವುದು ಕಡ್ಡಾಯ.
12. ವೈಟ್ ಫ್ಲೂಯಿಡ್ ಹಚ್ಚಿ ಉತ್ತರವನ್ನು ಬದಲಾಯಿಸಬಾರದು. ಇಂತಹ ಉತ್ತರಗಳನ್ನು ಮೌಲ್ಯ ಮಾಪನಕ್ಕೆ ಪರಿಗಣಿಸುವುದಿಲ್ಲ.
13. ಪರೀಕ್ಷಾ ಸಮಯದಲ್ಲಿ ಯಾವುದೇ ರೀತಿಯ ಅವ್ಯವಹಾರ ಕಂಡು ಬಂದಲ್ಲಿ ಅಂತಹ ಅಭ್ಯರ್ಥಿಗಳನ್ನು ನೇಮಕಾತಿಗೆ ಅರ್ಹರಲ್ಲವೆಂದು ಪರಿಗಣಿಸಿ ನಿಯಮಾನುಸಾರ ಕ್ರಮ ಜರುಗಿಸಲಾಗುವುದು.

### ಓ.ಎಂ.ಆರ್. ಉತ್ತರಪತ್ರಿಕೆ ಭರ್ತಿ ಮಾಡಲು ಸೂಚನೆಗಳು

(1) ಪ್ರತಿಯೊಂದು ಪ್ರಶ್ನೆಗೂ ಒಂದೇ ಒಂದು ಸರಿಯಾದ ಉತ್ತರವಿರುತ್ತದೆ. (2) ವೃತ್ತಗಳನ್ನು ನೀಲಿ / ಕಪ್ಪು ಬಾಲ್ ಪಾಯಿಂಟ್ ಪೆನ್ನಿನಿಂದ ಮಾತ್ರ ತುಂಬಬೇಕು. ಉತ್ತರವನ್ನು ತುಂಬಿದ ಮೇಲೆ ಬದಲಿಸಲು ಪ್ರಯತ್ನಿಸಬೇಡಿ. (3) ವೃತ್ತಗಳಲ್ಲಿರುವ ಸಂಖ್ಯೆಗಳು ಕಾಣದಂತೆ ವೃತ್ತವನ್ನು ಸಂಪೂರ್ಣವಾಗಿ ತುಂಬಬೇಕು (4) ಉತ್ತರ ಪತ್ರಿಕೆಯ ಮೇಲೆ ಯಾವುದೇ ರೀತಿಯ ಗುರುತು, ಗೀಟು ಅಥವಾ ಚುಕ್ಕೆಯಾಗಲೀ ಮಾಡಬಾರದು. (5) ಇದು ಕಾರ್ಬನ್ ರಹಿತ ಉತ್ತರ ಪತ್ರಿಕೆ. ಉತ್ತರ ಪತ್ರಿಕೆಯ ಎರಡನೇ ಪ್ರತಿಯನ್ನು ಪ್ರತ್ಯೇಕವಾಗಿ ತುಂಬುವ ಅಗತ್ಯ ಇಲ್ಲ.

SEAL



www.inyatrust.com

## KANNADA VERSION

1. ನಾವು ಉಸಿರಾಡುವ ವಾಯು ಅನಿಲಗಳ ಮಿಶ್ರಣ. ಈ ಮಿಶ್ರಣದಲ್ಲಿ ಕೆಳಗಿನ ಯಾವ ಅನಿಲ ಶೇಕಡಾವಾರು ಅತಿ ಹೆಚ್ಚು ಇರುತ್ತದೆ ?
   (1) ಇಂಗಾಲದ ಡೈ ಆಕ್ಸೈಡ್
   (2) ಸಾರಜನಕ
   (3) ಆಮ್ಲಜನಕ
   (4) ಓಝೋನ್

2. ಪ್ರೆಶರ್ ಕುಕ್ಕರ್ ಅಕ್ಕಿಯನ್ನು ವೇಗವಾಗಿ ಬೇಯಿಸುತ್ತದೆ. ಏಕೆಂದರೆ
   (1) ಅದು ಯಾವಾಗಲೂ ಸ್ಟೀಮ್ ತಪ್ಪಿಸಿಕೊಳ್ಳಲು ಅನುವು ಮಾಡಿಕೊಡುತ್ತದೆ
   (2) ಹೆಚ್ಚಿನ ಒತ್ತಡ ಅಕ್ಕಿ ಧಾನ್ಯಗಳ ಗಟ್ಟಿ ಹೊದಿಕೆಯನ್ನು ನಜ್ಜು ಗುಜ್ಜು ಮಾಡುತ್ತದೆ
   (3) ಇದು ಶಾಖ ಶಕ್ತಿ ಸುಲಭವಾಗಿ ತಪ್ಪಿಸಿಕೊಳ್ಳಲು ಅವಕಾಶ ಕೊಡುವುದಿಲ್ಲ
   (4) ಹೆಚ್ಚಿನ ಒತ್ತಡವು ನೀರಿನ ಕುದಿಯುವ ಬಿಂದುವನ್ನು ಹೆಚ್ಚಿಸುತ್ತದೆ

3. ಭಾರತದಲ್ಲಿ ದಶಕದ (2001 – 2011) ಜನಸಂಖ್ಯೆಯ ಅತಿಹೆಚ್ಚು ಬೆಳವಣಿಗೆ ದರ _____ ಲ್ಲಿ ದಾಖಲಾಗಿದೆ
   (1) ನೋಯ್ಡಾ (ಯುಪಿ)
   (2) ಕುರುಂಗ್ ಕುಮೇ (ಅರುಣಾಚಲ ಪ್ರದೇಶ)
   (3) ಗುರ್ಗಾವ್ (ಹರಿಯಾಣ)
   (4) ಚಿಂತಾಮಣಿ (ಕರ್ನಾಟಕ)

4. ನಿರ್ಮಲ ಆಕಾಶ ನೀಲಿ ಕಾಣುವುದು
   (1) ಬೆಳಕಿನ ಪ್ರಸರಣದಿಂದ
   (2) ಬೆಳಕಿನ ವಕ್ರವಿಯೋಜನೆಯಿಂದ
   (3) ಬೆಳಕಿನ ಪ್ರತಿಬಿಂಬದಿಂದ
   (4) ಬೆಳಕಿನ ವಕ್ರೀಕರಣದಿಂದ

5. ರಿಕ್ಟರ್ ಸ್ಕೇಲ್ _____ ಅಳೆಯಲು ಬಳಸಲಾಗುತ್ತದೆ
   (1) ದ್ರವದ ಸಾಂದ್ರತೆ
   (2) ಭೂಕಂಪನದ ತೀವ್ರತೆ
   (3) ಗಾಳಿಯ ಆರ್ದ್ರತೆ
   (4) ಗಾಳಿಯ ವೇಗ

6. ಭಾರತದ ಕೆಳಗಿನ ಯಾವ ಕೇಂದ್ರಾಡಳಿತ ಪ್ರದೇಶ ಅತಿ ಹೆಚ್ಚು ಜನ-ಸಾಂದ್ರತೆಯನ್ನು (ಪ್ರತಿ ಕಿಮೀ.ಗೆ) ಹೊಂದಿದೆ ?
   (1) ಚಂಡೀಘಡ್
   (2) ದೆಹಲಿ
   (3) ಲಕ್ಷದ್ವೀಪ
   (4) ಪುದುಚೆರಿ

7. ಡಾ. ವಿ.ಕುರಿಯನ್ _____ ಕ್ಷೇತ್ರದಲ್ಲಿ ಪ್ರಸಿದ್ಧಿ
   (1) ಪರಮಾಣು ಶಕ್ತಿ
   (2) ಹೈನುಗಾರಿಕೆ ಅಭಿವೃದ್ಧಿ
   (3) ಆರ್ಥಿಕ ಸುಧಾರಣೆಗಳು
   (4) ಕೋಳಿ ಅಭಿವೃದ್ಧಿ

8. ವಿಶ್ವ ವಿಖ್ಯಾತ ಅಜಂತಾ ಗುಹೆಗಳು ನೆಲೆಗೊಂಡಿರುವ ರಾಜ್ಯ
   (1) ಆಂಧ್ರ ಪ್ರದೇಶ
   (2) ಕೇರಳ
   (3) ಮಹಾರಾಷ್ಟ್ರ
   (4) ಒರಿಸ್ಸಾ

9. ಪರಾಗಸ್ಪರ್ಶವನ್ನು ಈ ಕೆಳಗಿನ ಯಾವುದು ಅತ್ಯುತ್ತಮವಾಗಿ ವ್ಯಾಖ್ಯಾನಿಸುತ್ತದೆ ?
   (1) ಪರಾಗ ಧಾನ್ಯಗಳು ಚಿಗುರುವುದು
   (2) ಅಂಡಾಣುವಿನಲ್ಲಿ ಪರಾಗ ಕೊಳವೆ ಬೆಳವಣಿಗೆ
   (3) ಪರಾಗಕೋಶದಿಂದ ಶಲಾಕಾಗ್ರಕ್ಕೆ ಪರಾಗ ಕಣಗಳ ವರ್ಗಾವಣೆ
   (4) ಕೀಟಗಳು ಹೂಗಳನ್ನು ಭೇಟಿಯಾಗುವಿಕೆ

10. ರಾಜ್ಯಸಭೆಗೆ ನಾಮನಿರ್ದೇಶನಗೊಂಡ ಮೊದಲ ಭಾರತೀಯ ನಟಿ
   (1) ಹೇಮ ಮಾಲಿನಿ
   (2) ಜಯ ಪ್ರದ
   (3) ನರ್ಗಿಸ್ ದತ್
   (4) ರೇಖಾ



www.inyatrust.com

**11.** ಈ ಕೆಳಗಿನ ಯಾವ ನಗರವನ್ನು "ಭಾರತದ ವಿದ್ಯುನ್ಮಾನ ನಗರ (Electronic City of India)" ಎಂದು ಕರೆಯಲಾಗುತ್ತದೆ ?

(1) ಬೆಂಗಳೂರು (2) ಕೊಲ್ಕತಾ

(3) ನವ ದೆಹಲಿ (4) ಮುಂಬೈ

**12.** ವಿಕ್ರಮ್ ಸಾರಾಭಾಯಿ ಬಾಹ್ಯಾಕಾಶ ಕೇಂದ್ರ ಸ್ಥಾಪಿತವಾಗಿರುವ ಸ್ಥಳ

(1) ಅಹಮದಾಬಾದ್

(2) ಪುಣೆ

(3) ಶ್ರೀಹರಿಕೋಟ

(4) ತಿರುವನಂತಪುರಂ

**13.** ಕಾಂಕ್ರೀಟ್ ರಸ್ತೆಯ ಮೇಲೆ ನಡೆಯುವದಕ್ಕಿಂತ ಮರಳು ರಸ್ತೆ ಮೇಲೆ ನಡೆಯುವುದು ಹೆಚ್ಚು ಕಷ್ಟಕರ ಏಕೆಂದರೆ

(1) ಮರಳು ಮೃದು ಮತ್ತು ಕಾಂಕ್ರೀಟ್ ಗಟ್ಟಿ

(2) ಮರಳು ಹರಳುಹರಳಾಗಿರುತ್ತದೆ ಆದರೆ ಕಾಂಕ್ರೀಟ್ ಮೆದುವಾಗಿರುತ್ತದೆ

(3) ಮರಳು ಮತ್ತು ಕಾಲುಗಳ ನಡುವಿನ ಘರ್ಷಣೆ ಕಾಂಕ್ರೀಟ್ ಮತ್ತು ಕಾಲುಗಳ ನಡುವಿನ ಘರ್ಷಣೆಗಿಂತ ಕಡಿಮೆಯಿರುತ್ತದೆ

(4) ಮರಳು ಮತ್ತು ಕಾಲುಗಳ ನಡುವಿನ ಘರ್ಷಣೆ ಕಾಂಕ್ರೀಟ್ ಮತ್ತು ಕಾಲುಗಳ ನಡುವಿನ ಘರ್ಷಣೆಗಿಂತ ಹೆಚ್ಚಿರುತ್ತದೆ

**14.** ಬೆಳಕು _____ ಲ್ಲಿ ಅತ್ಯಂತ ವೇಗವಾಗಿ ಚಲಿಸುತ್ತದೆ

(1) ಗಾಜು (2) ಸಾರಜನಕ

(3) ನಿರ್ವಾತ (4) ನೀರು

**15.** ಅಮ್ನೆಸ್ಟಿ ಇಂಟರ್‌ನ್ಯಾಶನಲ್ ಸಂಸ್ಥೆಯು ಈ ಕೆಳಗಿನ ಯಾವ ಕ್ಷೇತ್ರಕ್ಕೆ ಸಂಬಂಧಿಸಿದೆ ?

(1) ಪರಿಸರ ರಕ್ಷಣೆ

(2) ಪ್ರಾಣಿಗಳಿಗೆ ಕ್ರೌರ್ಯದ ರಕ್ಷಣೆ

(3) ಐತಿಹಾಸಿಕ ಸ್ಮಾರಕಗಳ ರಕ್ಷಣೆ

(4) ಮಾನವ ಹಕ್ಕುಗಳ ರಕ್ಷಣೆ

**16.** TRIPS (ಬೌದ್ಧಿಕ ಆಸ್ತಿ ಹಕ್ಕುಗಳ ವ್ಯಾಪಾರ ಸಂಬಂಧಿತ ಅಂಶಗಳು) ಒಪ್ಪಂದವನ್ನು _____ ನಿರ್ವಹಿಸುತ್ತದೆ

(1) UNO (ಸಂಯುಕ್ತ ರಾಷ್ಟ್ರಗಳ ಸಂಸ್ಥೆ)

(2) UNCTAD (ವ್ಯಾಪಾರ ಮತ್ತು ಅಭಿವೃದ್ಧಿ ಬಗ್ಗೆ ಸಂಯುಕ್ತ ರಾಷ್ಟ್ರ ಸಮ್ಮೇಳನ)

(3) WB (ವಿಶ್ವ ಬ್ಯಾಂಕ್)

(4) WTO (ವಿಶ್ವ ವ್ಯಾಪಾರ ಸಂಸ್ಥೆ)

**17.** ಬ್ಯಾಸ್ಕೆಟ್‌ಬಾಲ್ ಆಟದ ಪ್ರತಿ ಬದಿಯಲ್ಲಿ ಎಷ್ಟು ಆಟಗಾರರು ಆಡುತ್ತಾರೆ ?

(1) 6 (2) 5

(3) 4 (4) 3

**18.** ಭಾರತದ ರಾಷ್ಟ್ರಪತಿಯವರು ಲೋಕಸಭೆಯನ್ನು ಈ ಕೆಳಗಿನ ಯಾವ ಆಧಾರದ ಮೇಲೆ ವಿಸರ್ಜಿಸಬಹುದು ?

(1) ಪ್ರಧಾನಿ ಸಲಹೆ

(2) ಭಾರತದ ಮುಖ್ಯ ನ್ಯಾಯಾಧೀಶರ ಸಲಹೆ

(3) ಲೋಕಸಭಾ ಶಿಫಾರಸು

(4) ರಾಜ್ಯ ಸಭೆಯ ಶಿಫಾರಸು

**19.** "ಜೀವಸತ್ವ-ಬಿ" ನ ರಾಸಾಯನಿಕ ಹೆಸರು

(1) ಆಸ್ಕೋರ್ಬಿಕ್ ಆಮ್ಲ (2) ನಿಕೋಟಿನಮೈಡ್

(3) ರಿಬೋಫ್ಲಾವಿನ್ (4) ಥಯಾಮಿನ್

**20.** ಬಿಜಾಪುರ ಈ ಕೆಳಗಿನ ಯಾವುದಕ್ಕೆ ಹೆಸರುವಾಸಿಯಾಗಿದೆ ?

(1) ಗೋಳಗುಮ್ಮಟ

(2) ಭಾರಿ ಮಳೆ

(3) ಗೊಮ್ಮಟೇಶ್ವರ ಪ್ರತಿಮೆ

(4) ತೀವ್ರ ಬರ ಪರಿಸ್ಥಿತಿಗಳು

**21.** ಸಸ್ಯಗಳು ಪ್ರೋಟೀನನ್ನು _____ ಇಂದ ಸಂಯೋಜಿಸಿಕೊಳ್ಳುತ್ತವೆ

(1) ಅಮೈನೋ ಆಮ್ಲಗಳು

(2) ಕೊಬ್ಬಿನಾಮ್ಲಗಳು

(3) ಸಕ್ಕರೆ

(4) ಪಿಷ್ಟ



www.inyatrust.com

**22.** ರಾಜ್ಯಸಭಾ ಸದಸ್ಯರನ್ನು ಚುನಾಯಿಸುವವರು

(1) ಜನರು

(2) ಲೋಕಸಭೆ

(3) ವಿಧಾನಸಭೆಯ ಚುನಾಯಿತ ಸದಸ್ಯರು

(4) ವಿಧಾನಪರಿಷತ್ತಿನ ಚುನಾಯಿತ ಸದಸ್ಯರು

**23.** ಮುಖ್ಯಮಂತ್ರಿಗಳ ಸ್ಥಾನ

(1) ಪ್ರಧಾನಿ ಸ್ಥಾನಕ್ಕೆ ಸದೃಶವಾದದ್ದು

(2) ಅಧ್ಯಕ್ಷರ ಸ್ಥಾನಕ್ಕೆ ಸರಿ ಸಮಾನವಾದದ್ದು

(3) ಪ್ರಧಾನಿ ಮತ್ತು ಅಧ್ಯಕ್ಷ ಸ್ಥಾನಗಳ ಸಂಯೋಜನೆ

(4) ಸಂವಿಧಾನಿಕವಲ್ಲ

**24.** 'ದ್ರೋಣಾಚಾರ್ಯ ಪ್ರಶಸ್ತಿ _____ ಗೆ ನೀಡಲಾಗುತ್ತದೆ

(1) ಕ್ರೀಡಾಪಟುಗಳು (2) ತರಬೇತುದಾರರು

(3) ತೀರ್ಪುಗಾರರು (4) ಕ್ರೀಡೆ ಸಂಪಾದಕರು

**25.** ಕಾರಂಜಿ (fountain) ಪೆನ್ ಕಂಡುಹಿಡಿದವರಾರು ?

(1) ಜಾನ್ ಜೆ. ಲೌಡ್

(2) ಎ.ಬಿ. ಫೌಂಟನ್

(3) ಲೆವಿಸ್ ಇ ವಾಟರ್ಮ್ಯಾನ್

(4) ಕಿರ್ಕ್ ಪ್ಯಾಟ್ರಿಕ್ ಮ್ಯಾಕ್ಮಿಲನ್

**26.** ಭಾರತದ ಅತಿ ಎತ್ತರದ ಕಲ್ಲಿನ ವಿಗ್ರಹವಾದ ಜೈನ ಸಂತ ಗೊಮ್ಮಟೇಶ್ವರನ ವಿಗ್ರಹ ಎಲ್ಲಿದೆ ?

(1) ನವ ದೆಹಲಿ

(2) ಮಾಂಡು, ಮಧ್ಯಪ್ರದೇಶ

(3) ಶ್ರವಣಬೆಳಗೊಳ, ಕರ್ನಾಟಕ

(4) ಮೈಸೂರು, ಕರ್ನಾಟಕ

**27.** ಪ್ರಖ್ಯಾತ ಪುಸ್ತಕ "We, the People" ಬರೆದವರು ಯಾರು ?

(1) ಟಿ.ಎನ್. ಕೌಲ್

(2) ಜೆ. ಆರ್. ಡಿ. ಟಾಟಾ

(3) ಖುಶವಂತ ಸಿಂಗ್

(4) ನಾನಿ ಪಾಲ್ಖಿವಾಲ

**28.** ಸಾಮಾನ್ಯ ಮನುಷ್ಯರಲ್ಲಿ ಆಹಾರ ಸಂಪೂರ್ಣ ಹೀರಿಕೊಳ್ಳಲು ಕರುಳಿನ ಕೊನೆ ತಲುಪಲು ಸುಮಾರು _____ ಸಮಯ ಬೇಕು.

(1) 1 ದಿನ (2) 16 ಗಂಟೆಗಳು

(3) 14 ಗಂಟೆಗಳು (4) 12 ಗಂಟೆಗಳು

**29.** ಕೆಳಗಿನ ಯಾವ ಅಂಗ ಸರಿಯಾಗಿ ಕೆಲಸ ಮಾಡದಿದ್ದರೆ ಕಾಮಾಲೆ ರೋಗಕ್ಕೆ ಕಾರಣವಾಗುತ್ತದೆ ?

(1) ಕಿಡ್ನಿ

(2) ಲಿವರ್

(3) ಮೇದೋಜೀರಕ ಗ್ರಂಥಿ

(4) ಹೊಟ್ಟೆ

**30.** ICMR ಅಂದರೆ

(1) ಭಾರತೀಯ ವೈದ್ಯಕೀಯ ಸಂಶೋಧನಾ ಮಂಡಳಿ

(2) ಭಾರತೀಯ ಮಲೇರಿಯಾ ಸಂಶೋಧನಾ ಮಂಡಳಿ

(3) ಅಂತರಾಷ್ಟ್ರೀಯ ಹವಾಮಾನ ಸಂಶೋಧನಾ ಮಂಡಳಿ

(4) ಭಾರತೀಯ ವ್ಯಾಪಾರಿಗಳ ಮತ್ತು ಚಿಲ್ಲರೆ ವ್ಯಾಪಾರಿಗಳ ಚೇಂಬರ್

**31.** ನ್ಯೂಮಿಸ್ಮ್ಯಾಟಿಕ್ಸ್ (Numismatics) ಈ ಕೆಳಗಿನ ಯಾವುದರ ಅಧ್ಯಯನ ?

(1) ನಾಣ್ಯಗಳ (2) ಸಂಖ್ಯೆಗಳ

(3) ವ್ಯಕ್ತಿತ್ವದ (4) ಅಂಚೆಚೀಟಿಗಳ

**32.** ಜ್ಯೋತಿರ್ವರ್ಷ ಈ ಕೆಳಗಿನ ಯಾವುದಕ್ಕೆ ಸಂಬಂಧಿಸಿದೆ ?

(1) ದೂರ (2) ಶಕ್ತಿ

(3) ತೀವ್ರತೆ (4) ವೇಗ

**33.** ಏಪ್ರಿಲ್ 2012 ರಲ್ಲಿ ರಾಜ್ಯಸಭೆಗೆ ನಾಮನಿರ್ದೇಶನಗೊಂಡ ಸಕ್ರಿಯ ಕ್ರೀಡಾಪಟು

(1) ರಾಹುಲ್ ದ್ರಾವಿಡ್

(2) ಸುನಿಲ್ ಗವಾಸ್ಕರ್

(3) ಸಚಿನ್ ತೆಂಡೂಲ್ಕರ್

(4) ಪಂಕಜ್ ಅಡ್ವಾಣಿ



**www.inyatrust.com**

**34.** ಶೈಕ್ಷಣಿಕ ಮನೋವಿಜ್ಞಾನವು ಮುಖ್ಯವಾಗಿ ಪರಿಶ್ರಮಿಸುವುದು ಇದಕ್ಕಾಗಿ

(1) ವಿದ್ಯಾರ್ಥಿಯ ಕಲಿಕೆಯ ಸಾಮರ್ಥ್ಯ ಹೆಚ್ಚಿಸುವುದು

(2) ಬೋಧನೆಯ ಸರಳಮಾರ್ಗಗಳನ್ನು ಹುಡುಕಲು

(3) ಮನೆಗೆಲಸ ನಿರ್ವಹಣೆ ಪರಿಣಾಮಕಾರಿಯಾಗಲು

(4) ಪಠ್ಯಪುಸ್ತಕಗಳ ಗುಣವರ್ಧನೆ ಮಾಡಲು

**35.** ಕಾರ್ಲ್ ರೋಜರ್ಸ್ ಮಾಡಿದ ಹಿರಿಯ ಕೊಡುಗೆಗಳು ಇದರ ಅಭಿವೃದ್ಧಿಗೆ ಕಾರಣ ____

(1) ವರ್ತನಾತ್ಮಕ ಮನೋವಿಜ್ಞಾನ ಮುನ್ನಡೆ

(2) ಮಾನವೀಯ ಮನೋವಿಜ್ಞಾನ ಮುನ್ನಡೆ

(3) ಮನೋವಿಜ್ಞಾನದ ಮನೋವಿಶ್ಲೇಷಣಾ ಮಾರ್ಗ

(4) ಮನೋವಿಜ್ಞಾನದ ರಚನಾಕೇಂದ್ರಿತ ಮಾರ್ಗ

**36.** ಸೃಜನಾತ್ಮಕ ಉತ್ಪನ್ನದ ಬಹುಮುಖ್ಯ ಲಕ್ಷಣವಿದು ____

(1) ಪರಿಪೂರ್ಣತೆ

(2) ಸೌಂದರ್ಯ

(3) ಸ್ವಂತಿಕೆ

(4) ಕಾರ್ಯಕಾರಿತ್ವ

**37.** ಶೈಕ್ಷಣಿಕ ಮನೋವಿಜ್ಞಾನಿಯು ವಿದ್ಯಾರ್ಥಿಗಳ ಸಂಜ್ಞಾನಾತ್ಮಕ ಅಭಿವೃದ್ಧಿಯ ಬಗ್ಗೆ ತನಗಿರುವ ಜ್ಞಾನವನ್ನು ಬಳಸಿಕೊಳ್ಳುವುದು ಇದರ ಪರಿಣಾಮ ಕಾರತೆಯನ್ನು ಹೆಚ್ಚಿಸಲು

(1) ವಿದ್ಯಾರ್ಥಿ ಶಿಕ್ಷಕ ಪರಸ್ಪರ ಕ್ರಿಯೆ

(2) ಕಲಿವ ಪರಿಸರದೊಡನೆ ಪರಸ್ಪರ ಕ್ರಿಯೆ

(3) ಮಾತಾಪಿತೃಗಳೊಡನೆ ಕಲಿವವನ ಪರಸ್ಪರ ಕ್ರಿಯೆ

(4) ಸಹವರ್ತಿಗಳೊಡನೆ ಪರಸ್ಪರ ಕ್ರಿಯೆ

**38.** ಹತ್ತು ವರ್ಷ ವಯಸ್ಸಿನ ಬಾಲಕನೋರ್ವನು ಜಾಣತನ ಪರೀಕ್ಷೆಯಲ್ಲಿ 11ವ.6ತಿಂ. ಸಮವಾದ ಮನೋಯೋಗ್ಯತೆ ಗಳಿಸುತ್ತಾನೆ. ಆತನ ಜಾಣತನ ಗುಣಾಂಕವು ____

(1) 100 (2) 138

(3) 115 (4) 120

**39.** ಐದು ವರುಷ ವಯಸ್ಸಿನ ಹುಟ್ಟುಮೂಕಿ ಬಾಲಕಿಗೆ ಸಾಮಾನ್ಯರ ತರಗತಿಯಲ್ಲೇ ಸೇರಿಸಿ ಬರಹದೊಡನೆ ಅದರ ಉಚ್ಚಾರದ ಅನುಭವ ನೀಡಬಹುದು. ಹೇಗೆಂದರೆ ಆಕೆಯು ಬರೆಯಬಲ್ಲಳು ಮತ್ತು

(1) ಇತರರನ್ನು ನೋಡಿ ಹೇಳಲು ಪ್ರಯತ್ನಿಸುವಳು

(2) ಇತರರೊಡನೆ ತನ್ನ ಬರಹ ಹೋಲಿಸಬಲ್ಲಳು

(3) ಇತರರು ಉಚ್ಚರಿಸುವುದನ್ನು ಕೇಳಿ ಬರಹ ಹೋಲಿಸಬಲ್ಲಳು

(4) ಬರಹ ಹೋಲಿಸಲಾರಳು

**40.** ಪಿಯಾಜೆಯು ಮಗುವಿನ ಸಂಜ್ಞಾನಾತ್ಮಕ ಅಭಿವೃದ್ಧಿಯ ಹಂತಗಳ ಅಧ್ಯಯನಗಳಲ್ಲಿ ಅನುಸರಿಸಿರುವುದು ____

(1) ಪ್ರಯೋಗ ವಿಧಾನ

(2) ಚಿಕಿತ್ಸಾ ಪದ್ಧತಿ

(3) ಸರ್ವೇಕ್ಷಣ ಪದ್ಧತಿ

(4) ತಾತ್ಕಾಲಿಕ ವೀಕ್ಷಣಾ ಪದ್ಧತಿ

**41.** ಬೆಳೆಯುತ್ತಿರುವ ಮಗುವು ತಾತ್ಕಾಲಿಕ (ಆಯೋಜಿತ) ಅಥವಾ ಯೋಜಿತ ಕಲಿಯುವ ಸನ್ನಿವೇಶಗಳಿಂದ ಬಹುವಾಗಿ ಲಾಭಪಡೆಯುವುದು, ಮಗುವಿನಲ್ಲಿ ಈ ಗುಣವಿದ್ದರೆ ____

(1) ಅಭಿವೃದ್ಧಿ ಸಿದ್ಧತೆ

(2) ಚಿಂತನಾ ಪರಿಪಕ್ವತೆ

(3) ಯೋಗ್ಯ ವಯಸ್ಸು

(4) ದೈಹಿಕ ಯೋಗ್ಯತೆ



www.inyatrust.com

**42.** 'ಜೆ.ಪಿ ಗಿಲ್‌ಫೋರ್ಡ್' ನು ಜಾಣ್ಮೆಯ ಈ ವಾದದ ಪ್ರತಿಪಾದಕ _____

(1) ಏಕೈಕತಾ ವಾದ

(2) ಜಿ ಮತ್ತು ಎಸ್ ಕಾರಕ ವಾದ

(3) ಜಾಣ್ಮೆಯ ಸಂರಚನಾ ವಾದ

(4) ಸಮೂಹಕಾರಕ ವಾದ

**43.** ಪಾಠ ಪ್ರಗತಿಯಲ್ಲಿರುವಾಗ ವಿದ್ಯಾರ್ಥಿಯು ಸರಿಯುತ್ತರ ನೀಡುವ ಭರವಸೆಯಿರುವ ಪ್ರಶ್ನೆ ಕೇಳುವುದು ಶಿಕ್ಷಕನಿಗೆ ಈ ರೀತಿ ಅನುಕೂಲಕರ _____

(1) ಸರಿಯುತ್ತರದ ನಂತರ ಹೊಗಳಲು

(2) ತಪ್ಪು ಉತ್ತರದ ನಂತರ ತೆಗಳಲು

(3) ಉತ್ತರದ ನಂತರ ತಾಟಸ್ಥ್ಯ ವಹಿಸಲು

(4) ಹೆಚ್ಚು ಕಠಿಣ ವಿರುವ ಪ್ರಶ್ನೆ ಕೇಳಲು

**44.** ಬೇರೆ ಬೇರೆ ವಯೋಮಿತಿಯ ಮಕ್ಕಳನ್ನು ಅಧ್ಯಯನ ಮಾಡುವಾಗ ಏಕಕಾಲಕ್ಕೆ ಮಾಹಿತಿಯನ್ನು ಸಂಗ್ರಹಿಸಲು ಅನುಕೂಲಕರ ವಿಧಾನ _____

(1) ಸರ್ವೇಕ್ಷಣಾ ವಿಧಾನ

(2) ಚಿಕಿತ್ಸಕ ವಿಧಾನ

(3) ಚಾರಿತ್ರಿಕ ವಿಧಾನ

(4) ಪ್ರಯೋಗ ವಿಧಾನ

**45.** ಬೋಧನೆಯು ಅರ್ಥಪೂರ್ಣ ಕಲಿಕೆಯಲ್ಲಿ ಕೊನೆಗೊಳ್ಳಬೇಕಾದರೆ, ವಿದ್ಯಾರ್ಥಿಯಿಂದ ಬರುವ ಯೋಗ್ಯ ಉತ್ತರಗಳು ಹೀಗೆ ಬರುವಂತೆ ಯೋಜಿಸಬೇಕು _____

(1) ಅರ್ಥಪೂರ್ಣ ಕ್ರಮಾನುಗತಿಯಲ್ಲಿ

(2) ಪೂರ್ವದಲ್ಲೇ ಅರ್ಥಪೂರ್ಣವಾಗಿ

(3) ಅರ್ಥಪೂರ್ಣವಾಗಿ ಪುನರುದ್ಘೋಷಿತ ವಾಗುವಂತೆ

(4) ಅರ್ಥವನ್ನು ಒತ್ತಾಯ ಪೂರ್ವಕ ವಾಗಿ ಸ್ವೀಕರಿಸುವಂತೆ

**46.** ಯಾವುದೇ ಸಂದರ್ಭವಿದ್ದರೂ, ಶಿಕ್ಷಕನು ತನ್ನ ಕೃತಿಗಳ ವಿಶ್ಲೇಷಣೆಗಾಗಿ ಇದರಿಂದ ತಪ್ಪಿಸಿಕೊಳ್ಳಲು ಆಗದು _____

(1) ಪ್ರಯೋಗ

(2) ವ್ಯಕ್ತಿ ಅಧ್ಯಯನ

(3) ಜೀವನ ಚರಿತ್ರೆ ಅಧ್ಯಯನ

(4) ಅಂತರಾವಲೋಕನ

**47.** ಪ್ರಯೋಗ ವಿಧಾನದಲ್ಲಿ ಈ ಹಂತ ಮುಖ್ಯವಾದುದು _____

(1) ಮಗುವಿನ ಸಹಮತಿ ಪಡೆಯುವುದು.

(2) ವಿಶೇಷ ಘಟನೆಗಳನ್ನು ದಾಖಲಿಸುವುದು.

(3) ಪ್ರಾಕ್ಕಲ್ಪನೆ ರಚಿಸುವುದು.

(4) ಅನಗತ್ಯ ದತ್ತಾಂಶಗಳ ನಿರ್ಮೂಲನೆ

**48.** ತರಗತಿಯಲ್ಲಿ ವಿದ್ಯಾರ್ಥಿಯ ಆಕ್ರಮಣಕಾರಿ ನಡುವಳಿಕೆಯನ್ನು ಪರಿಹರಿಸಲು ಈ ಮಾರ್ಗವು ಅತ್ಯಂತ ಯೋಗ್ಯ _____

(1) ಶಿಸ್ತಿನ ಕ್ರಮ ಕೈಗೊಳ್ಳುವುದು

(2) ತರಗತಿಯಿಂದ ಹೊರಗಿರಿಸುವುದು

(3) ಆತನ ಪ್ರಸಂಗ ಅಭ್ಯಸಿಸುವುದು ಮತ್ತು ಕಾರಣ ಯೋಗ್ಯ ಚಿಕಿತ್ಸೆ ನೀಡುವುದು.

(4) ಆಕ್ರಮಣಕಾರಿ ವೃತ್ತಿಯನ್ನು ಸಹಿಸಿಕೊಳ್ಳುವುದು.

**49.** 11 ವರುಷಕ್ಕಿಂತ ಕಡಿಮೆ ವಯಸ್ಸಿನ ಮಕ್ಕಳು ಸಾಮಾನ್ಯವಾಗಿ ಇದಕ್ಕೆ ಶಕ್ತರಾಗಿರುವುದಿಲ್ಲ _____

(1) ಅಮೂರ್ತ ತಾರ್ಕಿಕ ಚಿಂತನೆ

(2) ಮೂರ್ತ ತಾರ್ಕಿಕ ಚಿಂತನೆ

(3) ಹಿಂಬರಿಕೆ ಮೂರ್ತ ಪ್ರವರ್ತನೆ

(4) ವಾಸ್ತವಿಕ ಎಣಿಕೆ ಪ್ರವರ್ತನೆ

**50.** ಹೊಸ ಬೋಧನಾ ವಿಧಾನವೊಂದರ ಪರಿಣಾಮ--ಕಾರಿತ್ವವನ್ನು ಅಧ್ಯಯನ ಮಾಡಲು, ಶಿಕ್ಷಕರು ಆಯ್ಕೆಮಾಡುವ ವಿಧಾನ _____

(1) ಪ್ರಯೋಗ

(2) ಅಂತರಾವಲೋಕನ

(3) ಚಾರಿತ್ರಿಕ ಪುನರಾವಲೋಕನ

(4) ರೇಖಾನುಗತ ಸರ್ವೇಕ್ಷಣೆ



www.inyatrust.com

**51.** ಜಾಣ್ಮೆ, ನೆನಪು (ಅಭಿಜ್ಞಾನ) ಮತ್ತು ಇತರ ಕಾರಕಗಳು ಸಮಾನವಿದ್ದಾಗ ದೀರ್ಘಕಾಲಿಕ ಕಲಿಕೆಯ ಧಾರಣೆಯು ಇದನ್ನವಲಂಬಿಸಿದೆ _____

(1) ಇತರ ಕಲಿವ ಚಟುವಟಿಕೆಗಳ ಮಧ್ಯಪ್ರವೇಶ

(2) ಪ್ರಾರಂಭಿಕ ಪ್ರಭುತ್ವದ ಮಟ್ಟ

(3) ಪ್ರಾರಂಭಿಕ ಕಲಿಕೆಯ ಅಭ್ಯಾಸಾವಧಿ

(4) ಸ್ವಾತಂತ್ರ್ಯ ಮತ್ತು ವಿಶ್ರಾಂತಿ

**52.** ಇಚ್ಛಿತ ವರ್ತನೆಯೆಡೆಗೆ ನಡೆಸಬಲ್ಲ ಸರಿಯಾದ ಸ್ಪಂದಕ ವರ್ತನೆಗಳನ್ನು ನಿರಂತರ ಪ್ರೋತ್ಸಾಹಕಗಳ ಮೂಲಕ ಪೋಷಿಸಿದಲ್ಲಿ _____

(1) ಇಚ್ಛಿತ ವರ್ತನೆಯನ್ನು ಮುಟ್ಟಲಾಗದು

(2) ಇಚ್ಛಿತ ವರ್ತನೆಯನ್ನು ಬಹು ಮಟ್ಟಿಗೆ ಮುಟ್ಟಬಹುದು

(3) ಅವಾಂಛಿತ ವರ್ತನೆಗಳೂ ಉಳಿಯುವುವು

(4) ಅವಾಂಛಿತ ವರ್ತನೆಗಳು ಅದೃಶ್ಯವಾಗುವುವು

**53.** ಉನ್ನತ ಆಂತರಿಕ ಅಭಿಪ್ರೇರಣೆಯುಳ್ಳ ವಿದ್ಯಾರ್ಥಿಯ ಉತ್ತಮ ವರ್ತನೆಗೆ ಸದಾ ಉಪಯುಕ್ತ ಪ್ರೋತ್ಸಾಹನ ನೀಡುತ್ತಾ ಬರುವುದು ____

(1) ಆಂತರಿಕ ಅಭಿಪ್ರೇರಣೆಗೆ ಪೋಷಕ

(2) ಆಂತರಿಕ ಅಭಿಪ್ರೇರಣೆಯನ್ನು ಕಡಿಮೆ ಮಾಡುತ್ತದೆ

(3) ಬಾಹ್ಯ ಅಭಿಪ್ರೇರಣೆಯನ್ನು ಸದಾ ಅನಿವಾರ್ಯ ಗೊಳಿಸುವುದು

(4) ನಂತರ ಬಾಹ್ಯ ಅಭಿಪ್ರೇರಣೆ ಅನಗತ್ಯವಾಗುವುದು

**54.** ಇದೊಂದು ಜಾಣ್ಮೆಯ ಪ್ರಮಾಣಬದ್ಧ ಮಾಪಕ

(1) ಷೋಡಶ ವ್ಯಕ್ತಿತ್ವ ಕಾರಕ (16 PF)

(2) ಥೀಮಾಟಿಕ್ ಅಪ್ಪರ್‌ಸೆಪ್ಷನ್ ಪರೀಕ್ಷೆ (TAT)

(3) ಸ್ಟಾನ್‌ಫರ್ಡ್ - ಬಿನೆಟ್ ಪರೀಕ್ಷೆ

(4) ರೊರ್‌ಷಾ ಮಸಿಯೊತ್ತು ಪರೀಕ್ಷೆ

**55.** ಪ್ರಮಾಣ ಬದ್ಧ ಜಾಣ್ಮೆಮಾಪಕ ಬಳಸಿ ನಡೆಸಿದ ಪರೀಕ್ಷೆಯಲ್ಲಿ ಗುಂಪಿನ ಸದಸ್ಯರು ಗಳಿಸಿದ ಅಂಕಗಳ ವಿತರಣೆಯನ್ನುಪಯೋಗಿಸಿ ಗುಂಪನ್ನು ತಾರತಮ್ಯತಾ ಸ್ತರಗಳಾಗಿ ಹೀಗೆ ವಿಂಗಡಿಸ ಬಹುದು.

(1) ಅಂತರ್ಮುಖಿ ಮತ್ತು ಬಹಿರ್ಮುಖಿಗಳಾಗಿ

(2) ಪ್ರಭುತ್ವಸಾಧಕ ಮತ್ತು ಸೇವಕ ಮನೋಭಾವದವರಾಗಿ

(3) ಉನ್ನತ ಮತ್ತು ನಿಮ್ನ ಅಭಿಪ್ರೇರಣೆಯುಳ್ಳವರಾಗಿ

(4) ಉನ್ನತ, ಸಾಮಾನ್ಯ ಮತ್ತು ನಿಮ್ನ ಯೋಗ್ಯತೆಯುಳ್ಳವರಾಗಿ

**56.** ಶಿಕ್ಷಕನು ಕಲಿಕೆಯ ವಿಷಯವೊಂದರಲ್ಲಿ ಬೇರೆಬೇರೆ ವಿದ್ಯಾರ್ಥಿಗಳ ಕಲಿಕೆಯ ವ್ಯಕ್ತಿಗತ ಅಗತ್ಯತೆಗಳನ್ನು ಪೂರೈಸಲು ಆತನಲ್ಲಿ ಆ ವಿಷಯದಲ್ಲಿ ಗಳಿಕೆಯ ಈ ಮಾಹಿತಿ ಇರಬೇಕು ____

(1) ಪರೀಕ್ಷೆಯಲ್ಲಿ ಗಳಿಸಿದ ಒಟ್ಟು ಅಂಕಗಳು

(2) ಅಧ್ಯಾಯ ಅಥವಾ ಘಟಕಗಳಿಗನುಗುಣ ಅಂಕಗಳು

(3) ಹಿಂದಿನ ಮತ್ತು ಪ್ರಸಕ್ತ ವರುಷದ ಅಂಕಗಳು

(4) ಎರಡು ಅಥವಾ ಹೆಚ್ಚು ಪರೀಕ್ಷೆಗಳ ಅಂಕಗಳು

**57.** ಆಂತರಿಕ ಅಭಿಪ್ರೇರಣೆ ಇದಕ್ಕೆ ಸಂಬಂಧಿಸಿರುವುದಿಲ್ಲ

(1) ಮಾಡಬೇಕಾದ ಕಾರ್ಯಕ್ಕೆ ತರುವ ಆತ್ಮಬಲ

(2) ಮಾಡಬೇಕಾದ ಕಾರ್ಯದಲ್ಲಿ ಮನಗಂಡ ಉಪಯುಕ್ತತೆ

(3) ಉದ್ಘೋಷಿಸಿದ ಉಪಯುಕ್ತ ಪ್ರೋತ್ಸಾಹಕಗಳು

(4) ಪೂರೈಸಬೇಕಾದ ವೈಯಕ್ತಿಕ ಅಗತ್ಯತೆಗಳು

**58.** ಗ್ಯಾನೆಯ ಪ್ರಕಾರ, ಸಮಸ್ಯಾಪರಿಹಾರ ಪ್ರಕ್ರಿಯೆಯು

(1) ಕೆಳ ಮಟ್ಟದ ಕಲಿಕೆಯ ಪ್ರಕ್ರಿಯೆ

(2) ಕಲಿಕೆಯ ಪ್ರಕ್ರಿಯೆಯಾಗಿರುವುದಿಲ್ಲ

(3) ಕಲಿಕೆಗೆ ಪೋಷಕ ಪ್ರಕ್ರಿಯೆ ಅಲ್ಲ

(4) ಉನ್ನತ ಮಟ್ಟದ ಕಲಿಕೆಯ ಪ್ರಕ್ರಿಯೆ



www.inyatrust.com

**59.** ಹುಡುಗ-ಹುಡುಗಿಯರು ಪರಸ್ಪರ ತೀಕ್ಷ್ಣ ಆಕರ್ಷಣೆಯ ಭಾವನೆಗೊಳಗಾಗುವುದು ಈ ಸಹಜ ಪ್ರವೃತ್ತಿ ಚುರುಕಾಗುವುದರಿಂದ ____

(1) ಪಾಲಕತನ (2) ಸಮೂಹಪ್ರಿಯತೆ

(3) ಕುತೂಹಲ (4) ಲೈಂಗಿಕತೆ

**60.** ಫ್ರಾಯ್ಡನ ಪ್ರಕಾರ ಮಾನವ ವ್ಯಕ್ತಿತ್ವವು ಪ್ರಬಲ ಮಾನಸಿಕ ಶಕ್ತಿಗಳ ಪರಸ್ಪರ ಕ್ರಿಯೆಯಿಂದಾಗುತ್ತದೆ. ಅವುಗಳೆಂದರೆ ____

(1) ಪ್ರಭುತ್ವಸಾಧಕತೆ ಮತ್ತು ಶರಣಾಗತಿ ಪ್ರವೃತ್ತಿ

(2) ಸಮೂಹದಲ್ಲಿ ಆತ್ಮಸಂಘಟನೆ

(3) ಪಾರಂಪರಿಕ ಮನೋವೈಜ್ಞಾನಿಕ ಪ್ರವೃತ್ತಿಗಳು, ಅಹಮಿಕೆ, ಪರಮ ಅಹಮಿಕೆ

(4) ಪ್ರಭುತ್ವ ಮತ್ತು ನಾವೀನ್ಯತೆಗಾಗಿ ಚಲನಶೀಲತೆ

**61.** ಪ್ರಯೋಗ ಪದ್ಧತಿಯಲ್ಲಿ, ಪ್ರಾಕ್ಕಲ್ಪನೆಯು ಮುಂದಾಗಿ ಈ ಕೆಳಗಿನ ಪ್ರಭಾವದ ನಿಖರ ಹೇಳಿಕೆಯಾಗಿದೆ.

(1) ಸ್ವತಂತ್ರ ಕಾರಕದ ಮೇಲೆ ಮಧ್ಯಪ್ರವೇಶಿಸುವ -ಕಾರಕದ ಪ್ರಭಾವ

(2) ಸ್ವತಂತ್ರ ಕಾರಕದ ಮೇಲೆ ಅವಲಂಬಿತ ಕಾರಕದ ಪ್ರಭಾವ

(3) ಅವಲಂಬಿತ ಕಾರಕದ ಮೇಲೆ ಸ್ವತಂತ ್ರಕಾರಕದ ಪ್ರಭಾವ

(4) ಸಂಧಾನಕಾರಕದ ಮೇಲೆ ಸ್ವತಂತ್ರ ಕಾರಕದ ಪ್ರಭಾವ

**62.** ಬಾಹ್ಯ ಅಭಿಪ್ರೇರಣೆಯು ಪ್ರತಿಸ್ಪಂದನವನ್ನನುಸರಿಸಿ ಇವುಗಳಿಂದಾಗುವ ಅಭಿಪ್ರೇರಣೆಯಾಗಿದೆ.

(1) ಪ್ರತಿಸ್ಪಂದನವು 'ಸರಿ' ಎಂಬ ತತ್‌ಕ್ಷಣ ಉಂಟಾಗುವ ಪರಿವೆ

(2) ಪ್ರತಿಸ್ಪಂದನವು 'ಸರಿ' ಎಂಬ ತಡವಾಗಿ ಉಂಟಾಗುವ ಪರಿವೆ

(3) 'ಕ್ಯಾಂಡಿಯನ್ನು ಸವಿಯುವ ಅಥವಾ TV ನೋಡುವ' ಅಂತಹ ತಕ್ಷಣ ಪ್ರತಿಫಲ

(4) ಕಲಿವ ಕಾರ್ಯದ ಉಪಯುಕ್ತತೆಯ ಪೂರ್ವಜ್ಞಾನ

**63.** ಅಭಾಗಿ ವೀಕ್ಷಣಾ ವಿಧಾನದಲ್ಲಿ ವೀಕ್ಷಣೆ ಮಾಡುವವನು

(1) ಯಾವುದೇ ಭಾಗವಹಿಸುವ ವ್ಯಕ್ತಿ

(2) ಸನ್ನಿವೇಶದಲ್ಲಿ ಭಾಗವಹಿಸುವವನಲ್ಲ

(3) ಪರಿಶೋಧನೆ ಮಾಡುವವನಲ್ಲ

(4) ಯಾವುದೇ ಸ್ವಯಂಸೇವಕ

**64.** ಸಾಂಪ್ರದಾಯಿಕ ಜಾಣ್ಮೆ ಮಾಪಕಗಳು ಬೌದ್ಧಿಕ ಪ್ರಕ್ರಿಯೆಗಳ ಅಸಮತೋಲಿತ ಒರೆಗಳಾಗಿವೆ. ಅವುಗಳಲ್ಲಿ ಈ ಕೆಳಗಿನ ಪ್ರಕ್ರಿಯೆಗಳು ಪ್ರತಿನಿಧಿಸಲ್ಪಟ್ಟಿಲ್ಲ ____

(1) ಒಮ್ಮುಖ ಚಿಂತನೆ

(2) ಮೌಲ್ಯ ಮಾಪನಾ ಚಿಂತನೆ

(3) ಸಮಸ್ಯಾ ಪರಿಹರಿಸುವಿಕೆ

(4) ಬಹುಮುಖ ಚಿಂತನೆ

**65.** ಸಹಕಾರದಲ್ಲಿ, ವ್ಯಕ್ತಿಗತ ಸಂಪನ್ಮೂಲ ಬಳಕೆ--ಯಾಗುವುದು ಈ ಸುಧಾರಣೆಗೆ ____

(1) ಸ್ವಯಂ ಕಾರ್ಯ

(2) ಸಹವರ್ತಿಗಳ ಕಾರ್ಯ

(3) ಸಾಮೂಹಿಕ ಕಾರ್ಯ

(4) ದುರ್ಬಲ ಸಹವರ್ತಿಗಳ ಕಾರ್ಯ

**66.** ಸಮಾಜನಕ್ಷೆಯನ್ನುಪಯೋಗಿಸಿ, ಇಂತಹ ವ್ಯಕ್ತಿಗಳನ್ನು ಗುರುತಿಸಬಹುದು.

(1) ಬಹುಜನ ಪ್ರಿಯ ಸದಸ್ಯರು

(2) ವೈಯಕ್ತಿಕವಾಗಿ ಆಯ್ಕೆಯಾದವರು

(3) ಕೆಡುಕು ಸಮೂಹ ಸದಸ್ಯರು

(4) ಸ್ವಕೇಂದ್ರಿತ ಅಂತರ್ಮುಖಿಗಳು

**67.** ಬದಲಾಗುತ್ತಿರುವ ಸಂದರ್ಭಗಳಲ್ಲಿ ಸಂವೇಗಾತ್ಮಕ ಮತ್ತು ಮಾನಸಿಕ ಸಂತುಲನೆ ಇಟ್ಟುಕೊಳ್ಳುವ ವ್ಯಕ್ತಿಯು

(1) ಉತ್ತಮ ಮಾನಸಿಕ ಸ್ವಾಸ್ಥ್ಯವುಳ್ಳವನು

(2) ನರಳುವ ಹಾಗೂ ಅನಾರೋಗ್ಯದಿಂದಿರು-ವವನು

(3) ಸನ್ನಿವೇಶಗಳಿಗೆ ತಕ್ಕಂತೆ ಸ್ಪಂದಿಸದವನು

(4) ವಾಸ್ತವಿಕತೆಗೆ ಪ್ರತಿಕ್ರಿಯಿಸದವನು



www.inyatrust.com

ಪ್ರಶ್ನೆಗಳು **68-69** :

**68.** ಕೊಟ್ಟಿರುವ ಶ್ರೇಣಿಯಲ್ಲಿ ಬಿಟ್ಟುಹೋಗಿರುವ ಸಂಖ್ಯೆಯನ್ನು ಕಂಡುಹಿಡಿಯಿರಿ :

4, 4, 8, 24, 96, ?

(1) 480 (2) 360
(3) 300 (4) 240

**69.** ಈ ಕೆಳಗಿನ ಸಂಖ್ಯಾ ಶ್ರೇಣಿಯಲ್ಲಿ ಬಿಟ್ಟು ಹೋಗಿರುವ ಸಂಖ್ಯೆ :

5, 7, 12, 19, 31, 50, ?

(1) 121 (2) 101
(3) 99 (4) 81

**70.** ಕೊಟ್ಟಿರುವ ಸಂಖ್ಯಾಶ್ರೇಣಿಯಲ್ಲಿ ತಪ್ಪಾಗಿರುವ ಸಂಖ್ಯೆ :

5, 27, 61, 122, 213, 340

(1) 27 (2) 61
(3) 122 (4) 213

ಪ್ರಶ್ನೆಗಳು **71-72** :

ಕೊಟ್ಟಿರುವ ಅಕ್ಷರ ಶ್ರೇಣಿಯನ್ನು ಪೂರ್ಣಗೊಳಿಸಿ :

**71.** BFJ, NRV, ZDH, LPT, ?

(1) XBF (2) WCF
(3) YBE (4) XBG

**72.** __ __ xyx __ __ yx __ xy

(1) x y x y x (2) x y y x y
(3) y x y x y (4) x x y y x

ಪ್ರಶ್ನೆಗಳು **73-75** :

ಲಂಬಸಾಲು II ರಲ್ಲಿ I ನೇ ಲಂಬಸಾಲಿನ ಪದಗಳ ಸಂಕೇತಗಳನ್ನು ಕೊಟ್ಟಿದೆ. ಈ ಸಂಕೇತಗಳು I ನೇ ಲಂಬಸಾಲಿನ ಪದಗಳ ಅಕ್ಷರಗಳಿಗೆ ಆನುಕ್ರಮವಾಗಿಲ್ಲ. ಕೊಟ್ಟಿರುವ ಪ್ರಶ್ನೆಗಳಲ್ಲಿನ ಪದಗಳ ಸಂಕೇತಗಳನ್ನು ಕಂಡುಹಿಡಿಯಿರಿ.

| **Column – I** ಪದಗಳು | **Column – II** ಸಂಕೇತಗಳು |
|---|---|
| AREA ............. | ebje |
| BOND.............. | vsog |
| TRACE............ | ejiib |
| DECIDE........... | lbobot |

**73.** TREND ಪದದ ಸಂಕೇತವು :

(1) bjiso (2) jibso
(3) ijbso (4) jiosb

**74.** BREAD ಪದದ ಸಂಕೇತವೇನು ?

(1) igebo (2) gibov
(3) giebo (4) gjbeo

**75.** DIRECT ಪದದ ಸಂಕೇತವನ್ನುಕಂಡುಹಿಡಿಯಿರಿ.

(1) otjbli (2) ojbilt
(3) jtoilb (4) tjboil

**76.** ರಶ್ಮಿಯು ದಕ್ಷಿಣಕ್ಕೆ ಅಭಿಮುಖವಾಗಿ 50 ಮೀ. ನಡೆಯುತ್ತಾಳೆ. ಅನಂತರ ತನ್ನ ಬಲಕ್ಕೆ ತಿರುಗಿ 30 ಮೀ. ನಡೆಯುತ್ತಾಳೆ. ಪುನ: ಅವಳು ಬಲಕ್ಕೆ ತಿರುಗಿ 50 ಮೀ. ನಡೆಯುತ್ತಾಳೆ. ಹಾಗಾದರೆ ಅವಳು ಪ್ರಾರಂಭ ಬಿಂದುವಿನಿಂದ ಎಷ್ಟು ದೂರವಿದ್ದಾಳೆ ಹಾಗೂ ಯಾವ ದಿಕ್ಕಿನಲ್ಲಿರುತ್ತಾಳೆ ?

(1) 50 ಮೀ. ಉತ್ತರ (2) 50 ಮೀ. ದಕ್ಷಿಣ
(3) 30 ಮೀ. ಉತ್ತರ (4) 30 ಮೀ. ಪೂರ್ವ

**ಕಚ್ಚಾ ಕಾರ್ಯಕ್ಕಾಗಿ ಜಾಗ**



www.inyatrust.com

**77.** 64 × 52 = 17, 48 × 56 = 23 ಮತ್ತು 74 × 35 = 19 ಎಂದು ಊಹಿಸಿದಾಗ 84 × 37 ಎಷ್ಟಕ್ಕೆ ಸಮವಾಗಿರುತ್ತದೆ ?

(1) 32 (2) 28
(3) 24 (4) 22

**78.** POPULAR ನ್ನು ಒಂದು ಸಾಂಕೇತಿಕ ಭಾಷೆಯಲ್ಲಿ QPQVMBS ಎಂದು ಸೂಚಿಸಿದರೆ, ಕೆಳಗಿನ ಯಾವ ಪದಕ್ಕೆ GBNPVT ಸಂಕೇತವಾಗಿರುತ್ತದೆ ?

(1) EAMOSU (2) FAMOUS
(3) FASOUM (4) AEOMUS


**79.** ಕೆಳಗೆ ಕೊಟ್ಟಿರುವ ಸಂಖ್ಯೆಗಳಲ್ಲಿ ಯಾವುದು ಭಿನ್ನವಾಗಿದೆ ?

(1) 145 (2) 257
(3) 399 (4) 290

**80.** ಕೆಳಗೆ ಕೊಟ್ಟಿರುವ ಸಂಖ್ಯಾಸಮೂಹಗಳಲ್ಲಿ ಯಾವುದು ಭಿನ್ನವಾಗಿದೆ ?

(1) 8936 (2) 6892
(3) 5974 (4) 5785

**81.** ಕೊಟ್ಟಿರುವ ಆಕೃತಿಯಲ್ಲಿರುವ ವರ್ಗಗಳ ಸಂಖ್ಯೆ :



(1) 12 (2) 15
(3) 18 (4) 20

**82.** ಯಾವ ಕನಿಷ್ಠ ಸಂಖ್ಯೆಯನ್ನು 8, 12, 16, 20 ಮತ್ತು 30 ರಿಂದ ಭಾಗಿಸಿದಾಗ ಶೇಷ 1 ಉಳಿಯುತ್ತದೆ ?

(1) 241 (2) 283
(3) 371 (4) 396

**83.** A ಮತ್ತು B ಗಳು O ಎಂಬ ಒಂದೇ ಬಿಂದುವಿನಿಂದ ನಡೆಯಲು ಪ್ರಾರಂಭಿಸುತ್ತಾರೆ. A ಯು 6 ಮಿ. ಪೂರ್ವಕ್ಕೂ ಹಾಗೂ B ಯು 6 ಮಿ. ಪಶ್ಚಿಮಕ್ಕೂ ನಡೆಯುತ್ತಾರೆ. ನಂತರ A ಯು 9 ಮಿ. ಉತ್ತರಕ್ಕೂ, B ಯು 4 ಮಿ. ಉತ್ತರಕ್ಕೂ ನಡೆಯುತ್ತಾರೆ. ಹಾಗಾದರೆ ಈಗ, ಅವರಿಬ್ಬರ ನಡುವೆ ಇರುವ ಅಂತರವೆಷ್ಟು ?


(1) 17 ಮಿ. (2) 16 ಮಿ.
(3) 14 ಮಿ. (4) 13 ಮಿ.

**84.** ಕೊಟ್ಟಿರುವ ಆಕೃತಿಯಲ್ಲಿ ಬಿಟ್ಟುಹೋಗಿರುವ ಸಂಖ್ಯೆಯನ್ನು ಕಂಡುಹಿಡಿಯಿರಿ.

| | | |
|---|---|---|
| T | M | 7 |
| P | K | 5 |
| S | Q | ? |

(1) 1 (2) 2
(3) 7 (4) 9

**85.** ಕೊಟ್ಟಿರುವ ಆಕೃತಿಯಲ್ಲಿರುವ ತ್ರಿಭುಜಗಳ ಸಂಖ್ಯೆಯನ್ನು ಕಂಡುಹಿಡಿಯಿರಿ.



(1) 28 (2) 26
(3) 24 (4) 22

**86.** ಒಂದು ಪರೀಕ್ಷೆಯಲ್ಲಿ ಶೇ. 70 ವಿದ್ಯಾರ್ಥಿಗಳು ಇಂಗ್ಲೀಷನಲ್ಲಿ, ಶೇ. 60 ವಿದ್ಯಾರ್ಥಿಗಳು ಇತಿಹಾಸದಲ್ಲಿ, ಶೇ. 40 ಎರಡೂ ವಿಷಯಗಳಲ್ಲಿ ಪಾಸಾಗಿರುತ್ತಾರೆ. ಹಾಗಾದರೆ ಶೇಕಡ ಎಷ್ಟು ವಿದ್ಯಾರ್ಥಿಗಳು ಎರಡೂ ವಿಷಯಗಳಲ್ಲಿ ಅನುತ್ತೀರ್ಣರಾಗಿರುತ್ತಾರೆ ?

(1) 30 % (2) 20 %
(3) 10 % (4) 5 %

**ಕಚ್ಚಾ ಕಾರ್ಯಕ್ಕಾಗಿ ಜಾಗ**



www.inyatrust.com

ಪ್ರಶ್ನೆಗಳು **87-88** :

ಕೊಟ್ಟಿರುವ ಸಾಮ್ಯತೆಯನ್ನು ಪೂರ್ಣಗೊಳಿಸಿ.

**87.** 9 : 8 : : 16 : ?

(1) 18 (2) 24
(3) 27 (4) 64

**88.** 6 : 60 : : ? : 504

(1) 363 (2) 352
(3) 286 (4) 210


**89.** 12 ಜನ ಸ್ನೇಹಿತರು ಒಂದು ಸಮಾರಂಭದಲ್ಲಿ ಪರಸ್ಪರ ಕೈಕುಲಿಕಿದಾಗ ನಡೆದ ಕೈಕುಲಿಕೆಯ ಒಟ್ಟು ಸಂಖ್ಯೆ ಎಷ್ಟು ?

(1) 66 (2) 68
(3) 70 (4) 72

ಪ್ರಶ್ನೆಗಳು **90-91** :


ಕೊಟ್ಟಿರುವ ಆಕೃತಿಗಳಲ್ಲಿ ಬಿಟ್ಟುಹೋಗಿರುವ ಸಂಖ್ಯೆಯನ್ನು ಕಂಡುಹಿಡಿಯಿರಿ.

**90.**




(1) 289 (2) 324
(3) 361 (4) 400

**91.**




(1) 46 (2) 42
(3) 40 (4) 36

**92.** ಒಂದು ಸಾಂಕೇತಿಕ ಭಾಷೆಯಲ್ಲಿ 3 5 7 9 6 ನ್ನು 4 4 8 8 7ಎಂದು ಬರೆದಿದೆ. ಹಾಗಾದರೆ 4 6 8 2 3 ರ ಸಂಕೇತ ಯಾವುದು ?

(1) 35914 (2) 55914
(3) 66833 (4) 55882

**93.** M, N, O, P, Q, R, S ಮತ್ತು T ಎಂಬ 8 ಮಕ್ಕಳು ಎರಡು ಪಂಕ್ತಿಗಳಲ್ಲಿ ಪ್ರತಿಯೊಂದರಲ್ಲಿ 4 ಮಕ್ಕಳಂತೆ ಕೆಳಗೆ ಹೇಳಿರುವ ರೀತಿಯಲ್ಲಿ ಕುಳಿತಿರುತ್ತಾರೆ.

(i) Q ಯು P ಯ ಮುಂದೆ ಮತ್ತು N ನು O ನ ಹಿಂದೆ ಕುಳಿತಿರುತ್ತಾರೆ.


(ii) T ಯು N ಮತ್ತು S ಗಳ ಮಧ್ಯದಲ್ಲಿ ಕುಳಿತಿರುತ್ತಾನೆ.

(iii) M ನು S ನ ಮುಂದೆ ಕುಳಿತಿರುತ್ತಾನೆ.

T ಯ ಮುಂದೆ ಯಾರು ಕುಳಿತಿರುತ್ತಾರೆ ?

(1) N (2) P
(3) Q (4) R

ಪ್ರಶ್ನೆ **94** ಮತ್ತು **95** ಈ ಕೆಳಗೆ ಕೊಟ್ಟಿರುವ ವೆನ್ ಚಿತ್ರಗಳನ್ನು ಅವಲಂಬಿಸಿವೆ.




**94.** ಮಹಿಳೆಯರು, ಶಿಕ್ಷಕರು, ವಿವಾಹಿತ ಮಹಿಳೆಯರು, ಇವನ್ನು ಯಾವ ವೆನ್ ಚಿತ್ರವು ನಿರೂಪಿಸುತ್ತದೆ ?

(1) 4 (2) 3
(3) 2 (4) 1

**95.** ಆಟಗಾರರು, ಕ್ರಿಕೆಟ್, ಟೆನ್ನಿಸ್, ಆಡುವವರನ್ನು ಯಾವ ವೆನ್ ಚಿತ್ರವು ನಿರೂಪಿಸುತ್ತದೆ ?

(1) 5 (2) 4
(3) 3 (4) 2

ಕಚ್ಚಾ ಕಾರ್ಯಕ್ಕಾಗಿ ಜಾಗ



www.inyatrust.com

**96.** ಈ ಕೆಳಗೆ ಕೊಟ್ಟಿರುವ ಸಂಖ್ಯಾಸಮೂಹದಲ್ಲಿ, 5 ರ ಮುಂದಿರುವ ಎರಡು ಸಂಖ್ಯೆಗಳ ಮೊತ್ತವು ಆ ಸಂಖ್ಯೆಯ ಹಿಂದಿರುವ ಎರಡು ಸಂಖ್ಯೆಗಳ ಮೊತ್ತಕ್ಕಿಂತ ಹೆಚ್ಚಾಗಿರುವಂತಿರುವ, ಎಷ್ಟು 5 ಗಳಿವೆ ?

3765832455487915348759876‍4

(1) ಒಂದು (2) ಎರಡು

(3) ಮೂರು (4) ನಾಲ್ಕು

**97.** ಕೆಳಗೆ ಕೊಟ್ಟಿರುವ ಅಕ್ಷರಗಳ ಗುಂಪುಗಳು ತಮ್ಮತಮ್ಮಲ್ಲಿ ಎರಡು ಬದಿಬದಿಯ ಅಕ್ಷರಗಳ ಮಧ್ಯೆ-ಸಮವಾದ ಸಂಖ್ಯೆಯ ಅಕ್ಷರಗಳನ್ನು ಬಿಟ್ಟು ಬಿಡುವ ಒಂದು ನಿಖರವಾದ ನಿಯಮವನ್ನು ಪಾಲಿಸುತ್ತವೆ. ಇವುಗಳಲ್ಲಿ ಯಾವ ಗುಂಪು ನಿಯಮಾನುಸಾರವಾಗಿದೆ ?

(1) G I K N Q S U

(2) P R T V X Z B

(3) B D G I K M O

(4) L K M P S U X

**98.** ಈ ಕೆಳಗಿನ ಆಕೃತಿಯಲ್ಲಿ ಬಿಟ್ಟುಹೋಗಿರುವ ಸಂಖ್ಯೆ-ಯನ್ನು ಕಂಡು ಹಿಡಿಯಿರಿ.


| | | |
|---|---|---|
| 1 | 3 | 7 |
| 5 | 12 | 14 |
| 25 | ? | 28 |
| 125 | 192 | 56 |

(1) 38 (2) 42

(3) 48 (4) 56

**99.** ಘನಗಳ ವಿವಿಧ ಮುಖಗಳನ್ನು ಕೊಟ್ಟಿದೆ. ಅವುಗಳ ಸಹಾಯದಿಂದ ಪ್ರಶ್ನೆಗೆ ಸರಿಯಾದ ಉತ್ತರವನ್ನು ಆಯ್ಕೆಗಳಿಂದ ಕಂಡು ಹಿಡಿಯಿರಿ.

ಘನದಲ್ಲಿ 3 ಕ್ಕೆ ಅಭಿಮುಖವಾಗಿರುವ ಸಂಖ್ಯೆ ಯಾವುದು ?





(1) 4

(2) 3

(3) 2

(4) 1

**100.**




ಉಪಾಧ್ಯಾಯರಲ್ಲದ ಹಾಡುಗಾರರು ಹಾಗೂ ನರ್ತಕರುಗಳನ್ನು ಯಾವ ಸಂಖ್ಯಾಸ್ಥಳವು-ಸೂಚಿಸುತ್ತದೆ ?

(1) 1

(2) 4

(3) 5

(4) 7

ಕಚ್ಚಾ ಕಾರ್ಯಕ್ಕಾಗಿ ಜಾಗ



www.inyatrust.com